# ಮೂಲವಿಜ್ಞಾನಕ್ಕೆ ಆದ್ಯತೆ ನೀಡಿ: ಕಾಗೇರಿ



ಎನ್.ಆರ್. ಕಾಲೊನಿಯ ಶ್ರೀರಾಮಮಂದಿರದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮತ್ತು ಸಪ್ತಋಷಿ ಫೌಂಡೇಷನ್ ವತಿಯಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು.

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಶೈಕ್ಷಣಿಕ ಪ್ರಗತಿಯಿಂದ ಮಾತ್ರ ಸುಶಿಕ್ಷಿತ ಸಮಾಜ ನಿರ್ಮಾಣ ಮಾಡಲು ಸಾಧ್ಯವಿದ್ದು, ವಿದ್ಯಾರ್ಥಿಗಳು ಮೂಲ ವಿಜ್ಞಾನಕ್ಕೆ ಆದ್ಯತೆ ನೀಡಬೇಕು ಎಂದು ವಿಧಾನಸಭೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಹೇಳಿದರು.

ಎನ್.ಆರ್. ಕಾಲೊನಿಯ ಶ್ರೀರಾಮಮಂದಿರದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮತ್ತು ಸಪ್ತಋಷಿ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿ, ಎಲ್ಲ ಸಮುದಾಯಗಳು ಶೈಕ್ಷಣಿಕವಾಗಿ ಪ್ರಗತಿ ಹೊಂದಿದಾಗ ಮಾತ್ರ ದೇಶದ ಪ್ರಗತಿ ಸಾಧ್ಯ. ಶಿಕ್ಷಣ ನೀಡುವ ಜತೆಗೆ ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಬೇಕು. ಅಲ್ಲದೇ ವ್ಯಕ್ತಿ ನಿರ್ಮಾಣಕ್ಕೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ವಿಜ್ಞಾನಕ್ಕೆ ನಮ್ಮ ಪೂರ್ವಜರು ಹೆಚ್ಚಿನ ಆದ್ಯತೆ ನೀಡಿದ್ದರು. ನಮ್ಮ ಋಷಿಮುನಿಗಳು, ತಪಸ್ವಿಗಳು ಸಾಧನೆಯನ್ನು ಮಾಡಿದ್ದಾರೆ ಎಂದು ನಾವು ಅಭಿಮಾನಿಸುತ್ತೇವೆ. ಅಂತಹ ಸಾಧನೆ ಹಿಂದೆ ವಿಜ್ಞಾನವೇ ಇದೆ. ಖಗೋಳ ಶಾಸ್ತ್ರ ಆಯುರ್ವೇದ, ಯೋಗ, ಇವೆಲ್ಲಾ ಮೂಲ ವಿಜ್ಞಾನವೇ ಆಗಿದೆ. ಭಾರತದ ಉಕ್ಕು, ಕಬ್ಬಿಣ, ಬಟ್ಟೆ ಇವೆಲ್ಲವೂ ಸರ್ವ ಶ್ರೇಷ್ಠವೇ ಆಗಿತ್ತು. ಬ್ರಿಟಿಷರ ಗುಲಾಮಿತನದ ಆಳ್ವಿಕೆ ವೇಳೆ ಈ ಶಿಕ್ಷಣ ಪದ್ಧತಿ ಜಾರಿಗೆ ಬಂದಿದ್ದು, ನಾವು ಮೂಲ ವಿಜ್ಞಾನವನ್ನೇ ಮರೆತು ಮುಂದುವರಿದಿರುವ ಪರಿಣಾಮ ಇಂದು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ ಎಂದರು.

ಅಖಿಲ ಕರ್ನಾಟಕ ಮಹಾಸಭೆ ಕಳೆದ 40 ವರ್ಷಗಳಿಂದಲು ಬಡವರಿಗೆ, ಮಧ್ಯಮ ವರ್ಗದವರಿಗೆ ಪ್ರತಿಭಾವಂತರ ಶಿಕ್ಷಣಕ್ಕೆ ಸಹಾಯ ಮಾಡುತ್ತಿದೆ. ಮಹಿಳಾ ವಿದ್ಯಾರ್ಥಿಗಳಿಗಾಗಿ ವಸತಿ ಸೌಲಭ್ಯ ಕಲ್ಪಿಸಲಾಗಿದೆ. ಶಿಕ್ಷಣದ ನಂತರವೂ ಸಹ ಉದ್ಯೋಗಕ್ಕೆ ಸಂಬಂಧಿಸಿದಂತೆ ಸಲಹೆ ಸೂಚನೆಗಳನ್ನು ನೀಡುತ್ತಿದೆ. ಏಕಾಗ್ರತೆ ಮತ್ತು ಛಲ ರೂಢಿಸಿಕೊಂಡಿದ್ದರಿಂದ ಈ ಸಾಧನೆ ಮಾಡಲು ಸಾಧ್ಯವಾಗಿದೆ. ಇಂದಿನ ದಿನಗಳಲ್ಲಿ ಮೊಬೈಲ್ ಬಿಟ್ಟಿರಲು ಸಾಧ್ಯವೇ ಇಲ್ಲ ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ, ಆ ಮೊಬೈಲ್, ಟಿವಿಗಳನ್ನು ಬಿಟ್ಟು ಛಲದಿಂದ ಈ ಸಾಧನೆ ಮಾಡುತ್ತಿರುವುದು ಪ್ರಶಂಸನಾರ್ಹ ಎಂದರು.

ಬಸವನಗುಡಿ ಶಾಸಕ ರವಿಸುಬ್ರಹ್ಮಣ್ಯ, ಶಿಕ್ಷಣ ತಜ್ಞ ಡಾ.ಎಚ್.ಎಸ್. ನಾಗರಾಜ್, ಎಕೆಬಿಎಂಎಸ್ ಅಧ್ಯಕ್ಷ ಕೆ. ಎನ್. ವೆಂಕಟನಾರಾಯಣ್, ಹಿರಿಯ ಪದಾಧಿಕಾರಿಗಳಾದ ಆರ್.ಲಕ್ಷ್ಮಿಕಾಂತ್, ಮಾಲಿನಿ, ಖಜಾಂಚಿ ಕೆ. ರಾಮಕೃಷ್ಣ ಕಾರ್ಯದರ್ಶಿ ಕೆ.ರಾಮ್ ಪ್ರಸಾದ್, ಹಲವು ಪ್ರಮುಖರು ಉಪಸ್ಥಿತರಿದ್ದರು.